3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು.

**Spl.C. 253/2026**

**ಫಿರ್ಯಾದುದಾರ:** ರಾಜ್ಯ ಸರ್ಕಾರದ ಪರವಾಗಿ
D.C.R.E. ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿತ:** ನಾಗೇಶ್.ಪಿ.ಆರ್. ಬಿನ್ ಲೇಟ್ ಕೋಡಿರಂಗಯ್ಯ
32 ವರ್ಷ, ಪೆಮ್ಮನಹಳ್ಳಿ ಗ್ರಾಮ,
ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು.

## ದೋಷಾರೋಪಣೆ

ನಾಗಿರೆಡ್ಡಿ.ಎ, 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ತುಮಕೂರು, ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ದೋಷಾರೋಪಣೆ ರಚಿಸುತ್ತಿದ್ದೇನೆ.

ದಿನಾಂಕ 02.03.2026 ರಂದು ರಾತ್ರಿ 11.30 ರಿಂದ 12 ಗಂಟೆ ಸಮಯದಲ್ಲಿ ಪೆಮ್ಮನಹಳ್ಳಿ ಗ್ರಾಮದ ತಿಮ್ಮಕ್ಕರವರ ಬಾಬ್ತು ಮನೆಯಲ್ಲಿ ಆರೋಪಿಯಾದ ನೀವು ವಾಸವಿದ್ದ ರೂಮ್‌ಗೆ ಚಾಸಾ.2 ರವರನ್ನು ಕರೆದುಕೊಂಡು ಬಂದು ಕೂಲಿ ಹಣದ ವಿಚಾರವಾಗಿ ಗಲಾಟೆ ಮಾಡಿ ಇದೇ ವಿಚಾರವಾಗಿ ಇದ್ದ ಹಳೇಯ ವೈಷಮ್ಯತೆಯಿಂದ ಆರೋಪಿಯಾದ ನೀವು ಚಾಸಾ.2 ರವರಿಗೆ ಉದ್ದೇಶಪೂರ್ವಕವಾಗಿ ಏನೋ ಹೊಲೆಯ ನನ್ನ ಮಗನೇ, ನನ್ನನ್ನೇ ದುಡ್ಡು ಕೇಳುತ್ತೀಯಾ, ಕೊಟ್ಟಾಗ ತೆಗೆದುಕೊಳ್ಳಬೇಕು, ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಿಸಿರುತ್ತೀರಿ. ಆದ್ದರಿಂದ,

ಆರೋಪಿಯಾದ ನೀವು ಭಾ.ನ್ಯಾ.ಸಂ.ಕಲಂ.352(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾಸಾ.2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಮನೆಯಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಚಾಸಾ.2 ರವರ ತಲೆಯ ಎಡಭಾಗಕ್ಕೆ 2 - 3 ಏಟು ಹೊಡೆದಿದ್ದು , ಆಗ ಚಾಸಾ.2 ರವರು ಎರಡೂ ಕೈಗಳನ್ನು ಅಡ್ಡ ಹಿಡಿದಾಗ ಎಡಕ್ಕೆ ಮುಂಗೈಗೆ, ಎಡಕಣ್ಣಿನ ಹತ್ತಿರ, ಬಲಗೈನ ಮೂರುಬೆರಳುಗಳ ಉಗುರು ಬೆರಳುಗಳನ್ನು ಕತ್ತರಿಸಿ ಚಾಸಾ.2 ರವರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ತೀವ್ರ ಸ್ವರೂಪದ ರಕ್ತಗಾಯವನ್ನುಂಟುಮಾಡಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಭಾ.ನ್ಯಾ.ಸಂ.ಕಲಂ.109(1)ರಡಿಯಲ್ಲಿ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯ ಕಲಂ 3(2)(va) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಚಾಸಾ.2 ರವರು ಪರಿಶಿಷ್ಟ ಜಾತಿಯ ಆದಿದ್ರಾವಿಡ ಜನಾಂಗಕ್ಕೆ ಸೇರಿರುತ್ತಾರೆ ಎಂದು ಗೊತ್ತಿದ್ದರೂ ಸಹ ಚಾಸಾ.2 ರವರನ್ನು ಉದ್ದೇಶಿಸಿ ಏನೋ ಹೊಲೆಯ ನನ್ನ ಮಗನೇ, ನನ್ನನ್ನೇ ದುಡ್ಡು ಕೇಳುತ್ತೀಯಾ, ಕೊಟ್ಟಾಗ ತೆಗೆದುಕೊಳ್ಳಬೇಕು, ಬೋಳಿ ಮಗನೇ ಎಂದು ಸಾರ್ವಜನಿಕವಾಗಿ ಬೈದು ಜಾತಿ ನಿಂದನೆ ಮಾಡಿರುತ್ತೀರಿ. ಆದ್ದರಿಂದ, ಆರೋಪಿಯಾದ ನೀವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯ ಕಲಂ 3(1)(r)(s) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಆರೋಪಿಯಾದ ನಿಮಗೆ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ವಿಚಾರಣೆ ಎದುರಿಸಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**ದಿನಾಂಕ 22 ನೇ ಜೂನ್ 2026.**

( **ನಾಗಿರೆಡ್ಡಿ.ಎ** )
3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.